All India Radio: Bangalore
National Bulletin In Kannada
15.01.2026  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
15.01.2026  07.35 a.m.

<><><><>

ಮುಖ್ಯಾಂಶಗಳು

1. ಇಂದು ಕಾಮನ್‌ವೆಲ್ತ್ ಪೀಠಸೀನಾಧಿಕಾರಿಗಳ ೨೮ನೇ ಸಮ್ಮೇಳನ : ಪ್ರಧಾನಿ ನರೇಂದ್ರಮೋದಿ ಉದ್ಘಾಟನೆ
2. ಪಂಜಾಬ್ ಹಾಗೂ ರಾಜಸ್ಥಾನ ಪ್ರವಾಸ ಕೈಗೊಂಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು
3. ಇಂದು ೭೮ನೇ ಸೇನಾ ದಿನ ; ಜೈಪುರದಲ್ಲಿ ದೇಶದ ಸೇನೆಯ ಸಾಮರ್ಥ್ಯ ಪ್ರದರ್ಶನ
4. ಇಂದು ಸಂಕ್ರಾಂತಿ ; ಉತ್ತರಪ್ರದೇಶ, ತಮಿಳುನಾಡು, ಕರ್ನಾಟಕ ಸೇರಿ ಹಲವೆಡೆ ಹಬ್ಬದ ಸಡಗರ
5. ಏಕದಿನ ಕ್ರಿಕೆಟ್ : ಭಾರತದ ವಿರುದ್ಧ ಏಳು ವಿಕೆಟ್‌ಗಳ ಅಂತರದ ಭರ್ಜರಿ ಗೆಲುವು ಸಾಧಿಸಿದ ನ್ಯೂಜಿಲೆಂಡ್

<><><><>

ಪ್ರಧಾನಿ ನರೇಂದ್ರ ಮೋದಿ ಅವರು, ನವದೆಹಲಿಯಲ್ಲಿಂದು ೨೮ನೇ ಕಾಮನ್‌ವೆಲ್ತ್ ಸಭಾಧ್ಯಕ್ಷರು ಹಾಗೂ ಪೀಠಸೀನಾಧಿಕಾರಿಗಳ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಈ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸಮ್ಮೇಳನದಲ್ಲಿ ೪೨ ದೇಶಗಳ ೬೧ ಸಭಾಧ್ಯಕ್ಷರು, ಹಾಗೂ ಪೀಠಸೀನಾಧಿಕಾರಿಗಳು ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಪಂಜಾಬ್ ಹಾಗೂ ರಾಜಸ್ಥಾನ ಪ್ರವಾಸ ಕೈಗೊಂಡಿದ್ದಾರೆ. ಪಂಜಾಬ್‌ನ ಗುರು ನಾನಾಕ್ ದೇವ್, ವಿಶ್ವವಿದ್ಯಾಲಯದ ೫೦ನೇ ಘಟಿಕೋತ್ಸವದಲ್ಲಿ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ, ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

<><><><>

ಇಂದು ೭೮ನೇ ಸೇನಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರು, ಸೇನಾ ಮುಖ್ಯಸ್ಥರಾಗಿ ಪದಗ್ರಹಣ ಮಾಡಿದ ದಿನವಾದ ಜನವರಿ ೧೫ರಂದು ಪ್ರತಿವರ್ಷ ಸೇನಾ ದಿನ ಎಂದು ಆಚರಣೆ ಮಾಡಲಾಗುತ್ತಿದೆ. ಕೆ.ಎಂ. ಕಾರ್ಯಪ್ಪ ಅವರು, ಭಾರತದ ಮೊದಲ ಸೇನಾ ಮುಖ್ಯಸ್ಥರಾಗಿ ದೇಶದ ಸೈನ್ಯವನ್ನು ಮುನ್ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಜೈಪುರದಲ್ಲಿಂದು ಬೆಳಿಗ್ಗೆ ವಿಭಿನ್ನ ಸೇನಾ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ. ಜಗತ್ಪುರದ ಮಹಲ್ ರಸ್ತೆಯಲ್ಲಿ ಸಹಸ್ರಾರು ಪ್ರೇಕ್ಷಕರ ಮುಂದೆ ಸೇನೆಯು ತನ್ನ ಶಿಸ್ತು, ಶಕ್ತಿ ಮತ್ತು ಆಧುನಿಕ ಸೇನಾ ಸಾಮರ್ಥ್ಯ ಪ್ರದರ್ಶಿಸಲಿದೆ. ಬೆಳಗ್ಗೆ ೧೦ ಗಂಟೆಗೆ ಭವ್ಯ ಕಾರ್ಯಕ್ರಮ ಆರಂಭವಾಗಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಮತ್ತು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ಈ ವರ್ಷದ ಆಚರಣೆಯು ವಿಶೇಷ ಮಹತ್ವ ಹೊಂದಿದ್ದು, ಇದೇ ಮೊದಲ ಬಾರಿಗೆ ಸೇನಾ ದಿನಾಚರಣೆಯನ್ನು ಸಾಂಪ್ರದಾಯಿಕ ಕಂಟೋನ್ಮೆಂಟ್ ಪ್ರದೇಶದ ಹೊರಗೆ ಏರ್ಪಡಿಸಿರುವುದು ವಿಶೇಷವಾಗಿದೆ. ಈ ಕಾರ್ಯಕ್ರಮ ಸೇನೆಯ ಸಂಪ್ರದಾಯಗಳು, ಶಿಸ್ತು ಮತ್ತು ಅದರ ನಿರಂತರ ವಿಕಸನದ ಸಾಮರ್ಥ್ಯಗಳನ್ನು ಜನ ಸಾಮಾನ್ಯರು ವೀಕ್ಷಿಸಲು ಇದೊಂದು ಅನನ್ಯ ಅವಕಾಶವಾಗಿದೆ. ಯುದ್ಧಭೂಮಿಯಲ್ಲಿ ಸೇನೆಯ ತಂತ್ರಜ್ಞಾನ-ಚಾಲಿತ ಶಕ್ತಿಯನ್ನು ಸಹ ಮೆರವಣಿಗೆ ಪ್ರದರ್ಶಿಸಲಾಗುತ್ತಿದೆ. ಇದು ಅತ್ಯಾಧುನಿಕ ತಂತ್ರಜ್ಞಾನ, ಯುದ್ಧಭೂಮಿ ನಾವೀನ್ಯತೆ ಮತ್ತು ಭಾರತೀಯ ಸೈನಿಕರ ಅಚಲ ಧೈರ್ಯ ಮತ್ತು ಶಿಸ್ತಿನ್ನು ಪ್ರಸ್ತುತಪಡಿಸುತ್ತಿದೆ. ಈ ಐತಿಹಾಸಿಕ ಘಟನೆಯನ್ನು ವೀಕ್ಷಿಸಲು ಜನ ಬೆಳಗಿನ ಜಾವದಿಂದಲೇ ಮಹಲ್ ರಸ್ತೆಯಲ್ಲಿರುವ ಸ್ಥಳಕ್ಕೆ ಆಗಮಿಸುತ್ತಿದ್ದಾರೆ.

<><><><>

ಉತ್ತರ ಪ್ರದೇಶದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಅತ್ಯಂತ ಸಡಗರದಿಂದ ಆಚರಿಸಲಾಗುತ್ತಿದೆ. ತೀವ್ರ ಶೀತಗಾಳಿ ಮತ್ತು ಚಳಿಯ ವಾತಾವರಣದ ನಡುವೆಯೂ ಭಕ್ತರು ಮಕರ ಸಂಕ್ರಾಂತಿಯ ಶುಭ ಸಂದರ್ಭದಲ್ಲಿ ಪವಿತ್ರ ನದಿಗಳಲ್ಲಿ ಸ್ನಾನ ಮಾಡುತ್ತಿದ್ದಾರೆ. ಪವಿತ್ರ ನದಿಗಳ ಘಾಟ್‌ಗಳಿಗೆ ಭಕ್ತರು ಸಾಗರೋಪಾದಿಯಲ್ಲಿ ಸೇರುತ್ತಿದ್ದಾರೆ. ಪ್ರಯಾಗರಾಜ್‌ನಲ್ಲಿ ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳ ಸಂಗಮದ ತಟದಲ್ಲಿ ನಡೆಯುವ ಸುಮಾರು ಒಂದೂವರೆ ತಿಂಗಳ

ಕಾಲದ ಮಾಘ ಮೇಳದ ಎರಡನೇ ಪ್ರಮುಖ ಪವಿತ್ರ ಸ್ನಾನದ ಉತ್ಸವ ಇದಾಗಿದೆ. ಮುಂಜಾನೆಯಿಂದ ಲಕ್ಷಾಂತರ ಭಕ್ತರು ಸಂಗಮದಲ್ಲಿ ಸ್ನಾನ ಮಾಡಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.

<><><><>

ತೆಲಂಗಾಣದಲ್ಲಿ ಮಕರ ಸಂಕ್ರಾಂತಿಯನ್ನು ಮೂರು ದಿನಗಳ ಕಾಲ ಆಚರಿಸಲಿದ್ದು, ಎರಡನೇ ದಿನವಾದ ಗುರುವಾರ ಧಾರ್ಮಿಕ ಭಕ್ತಿ ಮತ್ತು ಸಾಂಪ್ರದಾಯಿಕ ಪೂಜಾ ವಿಧಿ-ವಿಧಾನಗಳು ಹೆಚ್ಚಾಗಿ ನಡೆಯಲಿದೆ. ಈ ಹಬ್ಬ ಆಚರಣೆಗಾಗಿ ದೂರದ ಊರುಗಳಲ್ಲಿ ನೆಲೆಸಿರುವ ಜನರು ತಮ್ಮ ಗ್ರಾಮಗಳಿಗೆ ತೆರಳಿದ್ದಾರೆ. ಯುವತಿಯರು ತಮ್ಮ ಮನೆಗಳ ಅಂಗಳಗಳನ್ನು ಬಣ್ಣ ಬಣ್ಣದ ರಂಗೋಲಿಗಳಿಂದ ಅಲಂಕರಿಸಿ, ಎಮ್ಮೆ, ಹಸುವಿನ ಗೊಬ್ಬರದಿಂದ ಮಾಡಿದ ಗೊಬ್ಬೆಮ್ಮಲುಗಳನ್ನು ಇಟ್ಟು ವಿಶೇಷ ಪೂಜೆ ಸಲ್ಲಿಸುತ್ತಾರೆ. ಹರಿದಾಸರ ಭಜನೆಗಳು, ಅವರಿಗೆ ದಾನ ನೀಡುವುದು, ಅಲಂಕರಿಸಲಾದ ಗಂಗಿರೆಡ್ಡು ಎಮ್ಮೆಗೆ ಗೌರವ ಸಲ್ಲಿಸುವುದು, ಸಿಹಿತಿಂಡಿಗಳನ್ನು ಹಂಚಿಕೊಳ್ಳುವುದು, ಹೊಸ ಬಟ್ಟೆಗಳು ಮತ್ತು ಉಡುಗೊರೆಗಳನ್ನು ನೀಡುವುದು ಹಬ್ಬದ ವಿಶೇಷತೆಗಳಾಗಿವೆ. ಮಕರ ಸಂಕ್ರಾಂತಿ ಇಂದು ಆಚರಿಸಲಾಗುತ್ತಿದ್ದು, ಸೂರ್ಯನು ಮಕರದಿಂದ ಕರ್ಕಟ ವೃತ್ತಕ್ಕೆ ಪ್ರವೇಶಿಸುವುದನ್ನು ಸೂಚಿಸುತ್ತದೆ. ಇದು ಪಿತೃಗಳಿಗೆ ವಿಶೇಷ ಅರ್ಪಣೆಗಳನ್ನು ಸಲ್ಲಿಸಲು ಮಹತ್ವ ಹೊಂದಿದೆ. ಮತ್ತೊಂದೆಡೆ, ಹಿರಿಯರು ಮತ್ತು ಮಕ್ಕಳು ನಗರ ಪ್ರದೇಶಗಳಲ್ಲಿ, ವಿಶೇಷವಾಗಿ ಹೈದರಾಬಾದ್‌ನಲ್ಲಿ, ಗಾಳಿಪಟ ಹಾರಿಸುವುದರಲ್ಲಿ ಆನಂದಿಸುತ್ತಿರುವುದು ಕಂಡುಬರುತ್ತಿದೆ.

<><><><>

ಇಂದು ದೇಶಾದ್ಯಂತ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತಿದೆ. ಕರ್ನಾಟಕದಲ್ಲೂ ಸಂಕ್ರಾಂತಿ ಸಂಭ್ರಮ ಮನೆ ಮಾಡಿದೆ. ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಸ್ಥಾನದಲ್ಲಿ ಸಂಜೆ ಸೂರ್ಯರಶ್ಮಿಯನ್ನು ಕಣ್ತುಂಬಿಕೊಳ್ಳಲು ಭಕ್ತಾದಿಗಳು ಕಾತರಿಂದ ಕಾಯುತ್ತಿದ್ದಾರೆ. ಸುಗ್ಗಿಯ ಸಂಕೇತವಾದ ಪೊಂಗಲ್ ಹಬ್ಬವನ್ನು ಪ್ರಪಂಚದಾದ್ಯಂತ ತಮಿಳು ಭಾಷಿಕ ಜನ ಆಚರಿಸುತ್ತಾರೆ. ಇದು ತಮಿಳು ಪಂಚಾಂಗದಲ್ಲಿ ವಸಂತಕಾಲದ ಆರಂಭವೂ ಆಗಿದೆ. ಥಾಯ್ ಮಾಸ ಜೀವನದ ಎಲ್ಲಾ ಅಂಶಗಳಲ್ಲಿ ಹೊಸ ಆರಂಭವನ್ನು ತರುತ್ತದೆ. ಮದುವೆಗಳ ಹೊಸ ವ್ಯವಹಾರಗಳಿಗೆ ಇದು ಶುಭವೆಂದು ಪರಿಗಣಿಸಲಾಗಿದೆ. ಈ ದಿನದಂದು, ಸುಗ್ಗಿಯ ನಂತರದ ಕೊಯ್ಲನ್ನು ಸೂರ್ಯನಿಗೆ ಅರ್ಪಿಸಲಾಗುತ್ತದೆ. ಥಾಯ್ ಪಿರಾಂತಲ್ ವಜಿ ಪಿರಕ್ಕುಮ್ ಎಂಬುದು ಹಳೆಯ ಮಾತು. ಇದರರ್ಥ

ಈ ತಿಂಗಳು ಕೆಲಸಗಳನ್ನು ಸಾಧಿಸಲು ದಾರಿ ಮಾಡಿಕೊಡುತ್ತದೆ. ಜನತೆ ಕುಟುಂಬ ಮತ್ತು ಸಂಬಂಧಿಕರೊಂದಿಗೆ ಹಬ್ಬವನ್ನು ಆಚರಿಸುತ್ತಿದ್ದಾರೆ. ಸಣ್ಣ ಪೆಂಡಾಲ್ ನಿರ್ಮಿಸಿ ರಂಗೋಲಿಯ ಮಧ್ಯದಲ್ಲಿ ಹೊಸ ಮಣ್ಣಿನ ಮಡಕೆಯನ್ನು ಇಡುವ ದೃಶ್ಯಗಳು ಕಣ್ಣಿಗೆ ಹಬ್ಬವಾಗಿವೆ. ಮಣ್ಣಿನ ಮಡಕೆಯನ್ನು ಅರಿಶಿನ ಸಸ್ಯಗಳಿಂದ ಅಲಂಕರಿಸಲಾಗುತ್ತದೆ. ಪೊಂಗಲ್ ಅನ್ನು ಅಕ್ಕಿ, ಹಾಲು ಮತ್ತು ಬೆಲ್ಲದಿಂದ ಬೇಯಿಸಲಾಗುತ್ತದೆ. ಮಣ್ಣಿನ ಮಡಕೆ ತುಂಬಿದಾಗ ಕುಟುಂಬವು ಪೊಂಗಲೋ ಪೊಂಗಲ್ ಎಂದು ಕೂಗುತ್ತದೆ. ಅಂದರೆ ಉಡುಗೊರೆಯ ನಂತರ ಉಡುಗೊರೆ ಎಂಬುದು ಇದರರ್ಥ. ಈ ದಿನ ಜನರು ಸೂರ್ಯನಿಗೆ ಹಣ್ಣುಗಳನ್ನು ಅರ್ಪಿಸಿದ ನಂತರ ಬೀಜಗಳನ್ನು ಸಹ ಸಂರಕ್ಷಿಸುತ್ತಾರೆ. ಉಪಾಹಾರಕ್ಕಾಗಿ ಪೊಂಗಲ್, ವಡೆ ಚಟ್ನಿ ಮತ್ತು ಸಾಂಬಾರ್ ವಿಭಿನ್ನ ರುಚಿಗಳನ್ನು ಹೊಂದಿದೆ. ತಮಿಳುನಾಡು ಸರ್ಕಾರ ಪಡಿತರ ಚೀಟಿ ಹೊಂದಿರುವವರಿಗೆ ಕಬ್ಬಿನ ಜೊತೆಗೆ ಪೊಂಗಲ್ ಉಡುಗೊರೆಯಾಗಿ ಮೂರು ಸಾವಿರ ರೂಪಾಯಿಗಳನ್ನು ನೀಡಿದೆ. ಜಾನಪದ ಮತ್ತು ಸಾಂಸ್ಕೃತಿಕ ಉತ್ಸವವಾದ ಚೆನ್ನೈ ಸಂಗಮಮ್, ೨೦ಕ್ಕೂ ಹೆಚ್ಚು ಸಾರ್ವಜನಿಕ ಸ್ಥಳಗಳಲ್ಲಿ ಜಾನಪದ ಪ್ರದರ್ಶನ ಏರ್ಪಡಿಸಲಾಗಿದೆ. ಚೆನ್ನೈನಲ್ಲಿ ನಡೆಯುವ ಆಹಾರ ಉತ್ಸವವು ಪೊಂಗಲ್ ಆಚರಣೆಯ ಪ್ರಮುಖ ಭಾಗವಾಗಿದೆ.

<><><>

ಐಆರ್‌ಸಿಟಿಸಿ ಹಗರಣ ಪ್ರಕರಣದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಮತ್ತು ಅವರ ಪುತ್ರ ತೇಜಸ್ವಿ ಯಾದವ್ ವಿರುದ್ಧ ನಡೆಯುತ್ತಿರುವ ವಿಚಾರಣೆಯನ್ನು ಸ್ಥಗಿತಗೊಳಿಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರ ಪೀಠದಲ್ಲಿ ಮುಂದಿನ ವಾರದಿಂದ ಆರೋಪಿಗಳಿಬ್ಬರ ಪಾಟೀ ಸವಾಲು ನಡೆಯಲಿದೆ. ಲಾಲು ಪ್ರಸಾದ್ ಅವರ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದಿಸಿದರು. ಕಳೆದ ವರ್ಷದ ಅಕ್ಟೋಬರ್ ೧೬ ರಂದು ಲಾಲು ಪ್ರಸಾದ್, ಅವರ ಪತ್ನಿ ರಾಬ್ರಿ ದೇವಿ, ತೇಜಸ್ವಿ ಯಾದವ್ ಮತ್ತು ಇತರ ೧೧ ಜನರ ವಿರುದ್ಧ ವಂಚನೆ, ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಪಿತೂರಿ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯ ಉಲ್ಲಂಘನೆ ಆರೋಪಗಳ ಬಗ್ಗೆ ಆರೋಪಪಟ್ಟಿ ಸಲ್ಲಿಸಲಾಗಿದೆ.

<><><>

ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಸೇರಿದಂತೆ ೭೫ ದೇಶಗಳಿಂದ ವಲಸೆ ಬರುವವರ ವೀಸಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವುದಾಗಿ ಅಮೆರಿಕ ಘೋಷಿಸಿದೆ. ಈ ದೇಶಗಳಿಂದ ವಲಸೆ

ಬರುವವರು ಅಮೆರಿಕದ ಜನರಿಂದ ಸ್ವೀಕಾರಾರ್ಹವಲ್ಲದ ದರದಲ್ಲಿ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ಪಡೆಯುತ್ತಾರೆ. ಯಾವುದೇ ದೇಶವು ಲಕ್ಷಾಂತರ ಜನರನ್ನು ಸ್ವೀಕರಿಸಲು ಮತ್ತು ಅವರಿಗೆ ಶಿಕ್ಷಣ ಮತ್ತು ಆರೋಗ್ಯ ಸೇವೆ ನೀಡಲು ಸಾಧ್ಯವಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ನಂತರ ಅಲ್ಲಿನ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

<><><><>

ಜಮ್ಮು ಮತ್ತು ಕಾಶ್ಮೀರವು ತನ್ನ ರಫ್ತು ಅಭಿವೃದ್ಧಿ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ನಿತಿ ಆಯೋಗ ಬಿಡುಗಡೆ ಮಾಡಿದ ರಫ್ತು ಸಿದ್ಧತಾ ಸೂಚ್ಯಂಕ (ಇಪಿಐ) ೨೦೨೪ರಲ್ಲಿ, ಸಣ್ಣ ರಾಜ್ಯಗಳು, ಈಶಾನ್ಯ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ ಎರಡನೇ ಸ್ಥಾನವನ್ನು ಪಡೆದಿದೆ. ಈ ಕೇಂದ್ರಾಡಳಿತ ಪ್ರದೇಶವು ೫೧.೦೮ ಅಂಕಗಳನ್ನು ಗಳಿಸಿದ್ದು, "ಲೀಡರ್" ವರ್ಗದಲ್ಲಿ ಸ್ಥಾನ ಪಡೆದಿದೆ. ಈ ಸಾಧನೆ ಹಿಂದಿನ ವರ್ಷಗಳಿಗಿಂತ ಗಮನಾರ್ಹ ಸುಧಾರಣೆಯನ್ನು ತೋರಿಸುತ್ತದೆ. ೨೦೨೨ರ ಇಪಿಐನಲ್ಲಿ ೧೭ನೇ ಸ್ಥಾನದಿಂದ ೨೦೨೪ರಲ್ಲಿ ೨ನೇ ಸ್ಥಾನವನ್ನು ಕಾಯ್ದಿರಿಸಿಕೊಳ್ಳುವ ಮೂಲಕ  ಜಮ್ಮು ಮತ್ತು ಕಾಶ್ಮೀರವು ದೊಡ್ಡ ಹಾದಿಯನ್ನು ಮುನ್ನಡೆಯನ್ನು ಸಾಧಿಸಿದೆ.

<><><><>

ಮಹಾರಾಷ್ಟ್ರದ ೨೯ ಮಹಾನಗರ ಪಾಲಿಕೆಗಳಿಗೆ ಇಂದು ಮತದಾನ ಪ್ರಾರಂಭವಾಗಿದೆ.  ೮೯೩ ವಾರ್ಡ್‌ಗಳ ೨ ಸಾವಿರದ ೮೬೯ ಸ್ಥಾನಗಳಿಗೆ ಬೆಳಗ್ಗೆ ೭.೩೦ಕ್ಕೆ ಮತದಾನ ಪ್ರಾರಂಭವಾಗಿದ್ದು, ಸಂಜೆ ೫.೩೦ ಕ್ಕೆ ಮುಕ್ತಾಯಗೊಳ್ಳಲಿದೆ. ಮುಂಬೈನಲ್ಲಿ ೧ ಸಾವಿರದ ೭೦೦ ಮತ್ತು ಪುಣೆಯಲ್ಲಿ ೧ ಸಾವಿರದ ೧೬೬ ಸೇರಿದಂತೆ ಒಟ್ಟು ೩ ಕೋಟಿ ೪೮ ಲಕ್ಷ ಮತದಾರರು ೧೫ ಸಾವಿರದ ೯೩೧ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ಮತ ಎಣಿಕೆ ನಾಳೆ ನಡೆಯಲಿದೆ. ೨೯ ಮಹಾನಗರ ಪಾಲಿಕೆಗಳಿಗೆ ಆರು ವರ್ಷಗಳ ನಂತರ ಚುನಾವಣೆ ನಡೆಯುತ್ತಿದ್ದು, ಅವುಗಳ ಅವಧಿ ೨೦೨೦ ಮತ್ತು ೨೦೨೩ ರ ನಡುವೆ ಕೊನೆಗೊಂಡಿದೆ. ಇವುಗಳಲ್ಲಿ ಒಂಬತ್ತು ನಗರಗಳು ಅತ್ಯಂತ ನಗರೀಕರಣಗೊಂಡ ಪ್ರದೇಶವಾದ ಮುಂಬೈ ಮಹಾನಗರ  ವ್ಯಾಪ್ತಿಯಲ್ಲಿವೆ. ಬಿಜೆಪಿ ಮತ್ತು ಶಿವಸೇನೆ ಮೈತ್ರಿಕೂಟಗಳಾಗಿ ಸ್ಪರ್ಧಿಸುತ್ತಿದ್ದರೆ, ಎನ್.ಸಿ.ಪಿ ಈ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಏಕಾಂಗಿಯಾಗಿ ಕಣಕ್ಕಿಳಿದಿದೆ.

<><><><>

ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಭಾರತದ ವಿರುದ್ಧ ನ್ಯೂಜಿಲೆಂಡ್ ಏಳು ವಿಕೆಟ್‌ಗಳ ಅಂತರದ ಭರ್ಜರಿ ಗೆಲುವು ದಾಖಲಿಸಿತು. ಡ್ಯಾರಿಲ್ ಮಿಚೆಲ್ ಅವರ ಅಜೇಯ ೧೩೧ ರನ್‌ಗಳ ನೆರವಿನಿಂದ ನ್ಯೂಜಿಲೆಂಡ್ ತಂಡ ೪೭.೩ ಓವರ್‌ಗಳಲ್ಲಿ ೨೮೫ ರನ್‌ಗಳ ಗುರಿ ತಲುಪಿ ಗೆಲುವಿನ ನಗೆ ಬೀರಿತು. ಈ ಮೂಲಕ ಮೂರು ಪಂದ್ಯಗಳ ಸರಣಿಯನ್ನು ೧-೧ ರ ಅಂತರಿಂದ ಸಮಬಲ ಸಾಧಿಸಿತು. ಡ್ಯಾರಿಲ್ ಮಿಚೆಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಮಿಚೆಲ್ ಜೊತೆಗೆ, ವಿಲ್ ಯಂಗ್ ಬ್ಲಾಕ್ ಕ್ಯಾಪ್ಸ್ ೮೭ ರನ್ ಗಳಿಸಿ, ಮಿಚೆಲ್ ಅವರೊಂದಿಗೆ ಮೂರನೇ ವಿಕೆಟ್‌ಗೆ ೧೬೨ ರನ್ ಸೇರಿಸಿದರು. ಭಾರತದ ಪರ, ಹರ್ಷಿತ್ ರಾಣಾ, ಕುಲದೀಪ್ ಯಾದವ್ ಮತ್ತು ಪ್ರಸಿದ್ಧ್ ಕೃಷ್ಣ ತಲಾ ಒಂದು ವಿಕೆಟ್ ಉರುಳಿಸಿದರು. ನ್ಯೂಜಿಲೆಂಡ್ ದೊಡ್ಡ ಮೊತ್ತವನ್ನು ಬೆನ್ನಟ್ಟದಂತೆ ನಿಯಂತ್ರಿಸಲು ಭಾರತದ ಬೌಲರ್ ಗಳಿಂದ ಸಾಧ್ಯವಾಗಲಿಲ್ಲ.

<><><><>

ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಟಿ-ಟ್ವೆಂಟಿ ಕ್ರಿಕೆಟ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಯುಪಿ ವಾರಿಯರ್ಸ್ ವಿರುದ್ಧ ೭ ವಿಕೆಟ್‌ಗಳ ಅಂತರದ ಜಯ ಸಾಧಿಸಿತು. ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ ೨೦ ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ ೧೫೮ ರನ್ ಗಳಿಸಿತು. ಲಿಜೆಲ್ಲೆ ಲೀ ೬೭ ರನ್ ಹಾಗೂ ಶಫಾಲಿ ವರ್ಮಾ ೩೬ ರನ್ ಪೇರಿಸಿದರು. ನಂತರ ಲಾರಾ ವೋಲ್ವಾರ್ಡ್ಟ್ ಮತ್ತು ಜೆಮಿಮಾ ರೊಡ್ರಿಗಸ್ ಕ್ರಮವಾಗಿ ೨೫ ಮತ್ತು ೨೧ ರನ್‌ಗಳ ಕೊಡುಗೆ ನೀಡಿದರು. ಶಫಾಲಿ ವರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>